

ಹಿರಿಯರು ನಾಗಣ್ಣನ ಬಗ್ಗೆ ಹೇಳಿದ್ದ ಒಂದು ದೂರು ಏನಾಗಿತ್ತು ಎಂದರೆ ಈತ ಪದೇ ಪದೇ ಅಲ್ಲಿಗೆ ಹೋಗಿ ಅವಳೆದುರು ತನ್ನ ದೇಹದಾರ್ಢ್ಯವನ್ನು ಪ್ರದರ್ಶಿಸಿದ್ದಾನೆ ಎನ್ನುವುದು.

'ನೋಡು ಪಾರ್ವತಿ, ನಾನು ಒಂದು ಕ್ವಿಂಟಲ್ ಜೋಳವನ್ನು ಹೊರಬಲ್ಲೆ. ನನ್ನ ತೋಳುಗಳು ಎಷ್ಟು ಬಲಿಷ್ಠವಾಗಿವೆ ಎಂದರೆ ದೊಡ್ಡ ದಿಮ್ಮಿಗಳನ್ನು ಬರಿಗೈಯಿಂದಲೆ ಎತ್ತಬಲ್ಲೆ, ನಾಲ್ಕು ಕೊಡ ನೀರು ತರಬಲ್ಲೆ ಹೆಗಲ ಮೇಲೆ ಎರಡು, ಎರಡೂ ಕೈಯಲ್ಲಿ ಒಂದೊಂದು.' ಇಷ್ಟೆಲ್ಲ ಹೇಳುವುದು ಇವನಿಗೆ ಯಾಕೆ ಬೇಕಾಗಿತ್ತು? ಇವನ ಪರಾಕ್ರಮಕ್ಕೆ ಇವನನ್ನು ಮೆಚ್ಚಿಕೊಳ್ಳಬೇಕಿತ್ತು ಎಂದು ಎಲ್ಲರೂ ಅಂದುಕೊಳ್ಳುವರು. ಆದರೆ ಮಾಯಕ್ಕನಿಗೆ ಗೊತ್ತು, ಒಬ್ಬ ಹೆಂಗಸು ಒಬ್ಬ ಗಂಡಸನನ್ನು ಅವನ ಪರಾಕ್ರಮಕ್ಕಾಗಿ ಮೆಚ್ಚಿಕೊಳ್ಳುವುದಿಲ್ಲ. ಅವನ ಮನಸ್ಸು ಹೇಗಿದೆ ಎನ್ನುವುದು ಬಹುಶಃ ಅವರಿಗೆ ಮುಖ್ಯವಾಗಿರುವುದು! ಮುಂದೆ ಗೊತ್ತಾದ ಸಂಗತಿಯೆಂದರೆ ನಾಗಣ್ಣ ಮದುವೆಯಾಗಬೇಕೆಂದಿದ್ದ ಆ ಹುಡುಗಿ ಪಾರ್ವತಿ ಅವರ ಊರಿನ ತರುಣನೊಬ್ಬನೊಂದಿಗೆ ಓಡಿಹೋಗಿದ್ದಾಳೆ ಎಂಬುದು. ಅಂತೂ ತನ್ನಂತೆಯೆ ಅನೇಕರು ಓಡಿ ಹೋಗುತ್ತಿದ್ದಾರೆ ಎಂಬುದನ್ನು ತಿಳಿದು ಮಾಯಕ್ಕ ಕುಲುಕುಲು ನಕ್ಕಳು! ತುಸುವೆಂದರೆ ತುಸುವೂ ಸೊಕ್ಕು ಮಾಡುವುದಿಲ್ಲ ಈ ಹುಡುಗ. ಬಹುಶಃ ಸೊಕ್ಕು ಮಾಡುವುದನ್ನು ಸ್ವಲ್ಪಾದರೂ ಕಲಿತಿದ್ದರೆ ಯಾವುದೋ ಹುಡುಗಿ ಒಲಿದು ಬರುತ್ತಿದ್ದಳು. ಅವನ ಮದುವೆ ಮುರಿದು ಬಿದ್ದ ಘಟನೆ ಈ ಹುಡುಗನ ಮನಸ್ಸಿನಲ್ಲಿ ಕುಳಿತೇ ಬಿಟ್ಟಿದೆ. ಏನು ಮಾಡುವುದು? ಹೇಳಿದರೆ ಕೇಳುವುದಿಲ್ಲ. ಏನು ಹೇಳಿದರೂ ಸುಮ್ಮನಿರುತ್ತಾನೆ. ಆ ಪಾರ್ವತಿ ಎನ್ನುವವಳು ನಿಶ್ಚಿತಾರ್ಥ ಆಗಿದ್ದ ಈ ನಾಗಣ್ಣನನ್ನು ಬಿಟ್ಟು ಅದ್ಯಾವುದೊ ಪರಮೇಶ್ವರನ ಜೊತೆ ಹೋಗಿಬಿಟ್ಟಳು. ಇವನು ಅದನ್ನೆ ಮನಸ್ಸಿಗೆ ಹಚ್ಚಿಕೊಂಡು ಕುಳಿತರೆ ಹೇಗೆ? 'ಹೋಗಲಿ ಬಿಡು, ನಾಗು. ಅವಳಿಗಿಂತ ಚೆಲುವೆಯನ್ನು ಹುಡುಕಿ ನಿನಗೆ ಅಕ್ಕಿಕಾಳು ಒಗೆಯುತ್ತೇವೆ' ಎಂದರೆ ಕೇಳುವುದಿಲ್ಲ ಹುಡುಗ. ಅವನ ಮನಸ್ಸಿಗೆ ಬಂದಾಗ ಆಗಲಿ ಬಿಡಿ ಎಂದು ಎಲ್ಲರೂ ಈಗ ಸುಮ್ಮನಾಗಿದ್ದಾರೆ. ಹುಡುಗಿಯ ಮನಸ್ಸು ಸೆಳೆಯುವುದು ಬಾವಿಯ ನೀರು ಸೇದುವುದಕ್ಕಿಂತಲೂ ತುಂಬ ಕಠಿಣ ಹಾಗೂ ತುಂಬ ಸಂಕೀರ್ಣವಾದುದು ಎಂಬುದು ಬಹುಶಃ ಅವನ ಅರಿವಿಗೆ ಬಂದಿರಬೇಕು! ಪಾತಾಳಕ್ಕೆ ಹೋದರೂ ಸರಿಯೇ, ಗಗನಕ್ಕೆ ಜಿಗಿದರೂ ಸರಿಯೇ, ಮನಸ್ಸಿನ ತಾಕಲಾಟಗಳನ್ನು ತಪ್ಪಿಸುವುದು ಅದೆಷ್ಟು ಕಷ್ಟ!

ಯಾಕೋ, ಏನೋ ಬಹಳ ದಿನಗಳಿಂದ ಸಿಟ್ಟು ಮಾಡಿಕೊಂಡಂತಿದ್ದ ಸೂರ್ಯ ಅಗದೀ ನಿಧಾನ ಗತಿಯಲ್ಲಿ ಪಶ್ಚಿಮಕ್ಕೆ ಸರಿಯತೊಡಗಿದ್ದ. ಎಷ್ಟೋ ದಿನಗಳಿಂದ ನೆಲಕ್ಕೆ ಮಳೆ ಹನಿಯ ಸ್ಪರ್ಶವೇ ಇರಲಿಲ್ಲ. ಇಂದು ಮಳೆಯಾದೀತು, ನಾಳೆ ಮಳೆಯಾದೀತೆಂದು ಮಲ್ಲೂರು ಮತ್ತು ಸುತ್ತಮುತ್ತಲ ಊರುಗಳ ಮಂದಿ ಬಾಯಿ ಬಾಯಿ ಬಿಡುತ್ತ ಮುಗಿಲ ಕಡೆ ನೋಡುತ್ತಿದ್ದರು. ಮಳೆಯಿಲ್ಲದೆ ಇಳೆ ಹೇಗೆ ನಲುಗಿದ್ದಾಳೆ ನೋಡು, ಹೇ, ಮಳೆರಾಜ, ನಮ್ಮ ಕೊರಗು ನಿನಗೆ ಕೇಳಿಸದೆ ಎನ್ನುವಂತೆ ಪಶ್ಚಿಮದಲ್ಲಿ ದಟ್ಟೈಸಿದ ಮೋಡಗಳನ್ನು ಎಂದೂ ನೋಡದವರಂತೆ ಜನ ನೋಡುತ್ತ ನಿಲ್ಲುವರು. ನೀರು ಸುರಿಸೋಮಣ್ಣನ ಕಣ್ಣರಳಿಸೋ ಮಾದೇವ ಎಂದು ಈಶ್ವರನ ಗುಡಿಯಿರುವ ದಿಕ್ಕಿಗೆ ಕೈಮುಗಿಯುವರು. ಇವರ ಕಣ್ಣಾಲಿಗಳಲ್ಲಿ ತುಂಬಿಕೊಂಡ ಹನಿಗಳು ಮಾದೇವನಿಗೆ ಕಾಣಿಸಿದವೋ ಇಲ್ಲವೋ; ವರುಣದೇವನಿಗೆ ಇವರ ದನಿ ಕೇಳಿತೋ, ಬಿಟ್ಟಿತೋ ಗೊತ್ತಿಲ್ಲ. ಮೋಡ ಮಾತ್ರ ಆಗಿಂದಾಗ ಕಟ್ಟಿದಂತೆ ಮಾಡುವುದು, ಹಾಗೇ ಸದ್ದಿಲ್ಲದೆ ಎತ್ತಲೋ ಜಾರುವುದು ನಡೆಯುತ್ತಿತ್ತು.

ಜನರ ಕಷ್ಟ ಕಟ್ಟಿಕೊಂಡು ತನಗೇನಾಗಬೇಕಿದೆ ಎನ್ನುವಂತೆ ಸೂರ್ಯ ಕೆಂಡದ ಮಳೆಯನ್ನು ಸುರಿಸುತ್ತಲೆ ಇದ್ದ. ಕರುಣೆಯೆನ್ನುವುದು ತನ್ನಲ್ಲಿ ಕಿಂಚಿತ್ತೂ ಇಲ್ಲದವನಂತೆ ಕಡುಗಪ್ಪ ಮುಗಿಲು ಹುಡುಕುವವರ ಕಣ್ಣುಗಳನ್ನು ಆತ ಕುಕ್ಕಿ ಕುಕ್ಕಿ ತಿನ್ನತೊಡಗಿದ್ದ. ಪೃಥ್ವಿಯೆನ್ನುವುದು ನಿಗಿನಿಗಿ ಕೆಂಡದ ಕುಲುಮೆಯಾಗಿ ಜನ ಕೊತಕೊತ ಕುದಿಯುತ್ತಿದ್ದರೂ ಕಿಚ್ಚಿಗೆ ನೀರು ಸುರಿಯದೆ ತುಪ್ಪ ಸುರಿಯುತ್ತಿದ್ದ. ದೈವಕ್ಕೆ ದಯವೆಂಬುದಿಲ್ಲವೆ? ನಂಬದೆ, ನೆಚ್ಚದೆ, ಬರಿದೇ ಕರೆದರೆ ಆ ಮಾತು ಬೇರೆ. ಮಂದಿ ಮಾದೇವನನ್ನು ನೆಚ್ಚುತ್ತಿದ್ದರು. ನೆಚ್ಚಿ ಕರೆಯುತ್ತಿದ್ದರು. ಸಂಪೂರ್ಣ ಶಿವನ ಧ್ಯಾನದಲ್ಲಿಯೇ ಇದ್ದು, ಪೂಜೆಪುನಸ್ಕಾರ ಮಾಡುತ್ತ, ಎತ್ತುಗಳಿಗೆ ವಾರ ಬಿಡುತ್ತ, ಪ್ರತಿ ಸೋಮವಾರಕ್ಕೊಮ್ಮೆ ಸೋಮೇಶ್ವರನ ಗುಡಿಗೆ ಬರಿಗಾಲಲ್ಲಿ ನಡೆಯುತ್ತ ಪಾದಗಳಿಗೆ ಗುಳ್ಳೆ ಎಬ್ಬಿಸಿಕೊಂಡಿದ್ದರು. ಸಾರುವ ಐನೋರು ಬಂದು, ಸಂಕಲ್ಪ ಸಿದ್ಧಿಯಾಗುವತನಕ ಮುಳ್ಳಿನ ಪಾದುಗೆಗಳ ಮೇಲೆ ನಿಂತಿದ್ದನ್ನೂ ಜನರು ಮರೆತಿಲ್ಲ. ಹಾಗಾಗಿ ಅನೇಕರು ಹಳ್ಳಿಗೆ ಒಳ್ಳೆಯದಾಗುವದಾದರೆ ತಮ್ಮ ಈ ನಿತ್ಯನೇಮಗಳೇನು ದೊಡ್ಡವಲ್ಲ ಎನ್ನುತ್ತ ಕಂಡಕಂಡ ದೇವರುಗಳಿಗೆ ಬರಿಗಾಲಲ್ಲಿ ನಡೆಯುವರು, ಗುಡಿಗೆ ಸುತ್ತು ಹಾಕುವರು. ವಾರಕ್ಕೊಂದು ದಿನ ಉಪವಾಸ ಮಾಡುವರು. ಸುತ್ತಲಿನ ಮಠಗಳಿಗೆ ನಸುಕಿನಲ್ಲಿಯೇ ನಡೆಯುತ್ತ ಹೋಗಿ ತಮಗೆ ಸಾಧ್ಯವಾದಷ್ಟು ಧನಕನಕಗಳನ್ನು ಗುರುಗಳ ಪಾದಗಳ ಹತ್ತಿರ ಇಟ್ಟು ಭಯಭಕ್ತಿಯಿಂದ ನಮಸ್ಕರಿಸುವರು. ಇವರ ಉಪಾಸನೆ ಉಪವಾಸಗಳು ಪರಮೇಶ್ವರನನ್ನು ತಲುಪಿ ಅವನ ಕರುಣಾ ದೃಷ್ಟಿ ಇನ್ನೇನು ಇವರ ಮೇಲೆ ಮತ್ತು ಈ ಇಳೆಯ ಮೇಲೆ ಬೀಳಬಹುದೆನಿಸುತ್ತಿತ್ತು.

ಒಮ್ಮೊಮ್ಮೆ ಗಾಳಿ ಎಲ್ಲಿಂದಲೋ ಜೋರಾಗಿ ಬೀಸತೊಡಗುತ್ತಿತ್ತು. ತರಗೆಲೆಗಳು ಹಾರುತ್ತಿದ್ದವು. ಒಣಗಿದ ಗಿಡಮರಗಳು ಸುಂಟರಗಾಳಿಯ ಅಬ್ಬರಕ್ಕೆ ಬೇರು ಸಮೇತ ನೆಲಕ್ಕೆ ಬೀಳುವವೇನೋ ಎನಿಸಿ ಹತ್ತಿರವಿದ್ದವರು ದೂರ ಸರಿಯುತ್ತಿದ್ದರು. ದಟ್ಟ ಮೋಡಗಳು ಒಂದರೊಳಗೊಂದು ಕೂಡಿಕೊಂಡು ಆಕಾಶದಲ್ಲಿ ಕರಿಛಾವಣಿಯನ್ನು ಹಾಕುತ್ತಿರುವಂತೆ ಕಾಣುತ್ತಿದ್ದವು. ಇನ್ನೇನು ಮಳೆ ಬಂತು, ಇನ್ನೇನು ಹಗಲು ರಾತ್ರಿ ಬರೀ ರಪ್‌ರಪ್ ಸದ್ದಷ್ಟೆ ಕೇಳೀತು, ಇನ್ನೇನು ಕೆರೆ ತುಂಬೀತು, ಇನ್ನೇನು ಹಳ್ಳ ಹಾರಿಗ್ಗಾಲಿನಿಂದ ಹರಿದೀತು ಎಂದುಕೊಂಡು ಜನರ ಮುಖ ಅರಳುತ್ತಿದ್ದವು. ಅಜ್ಜ ಅಜ್ಜಿಯರ ಮುಖದಲ್ಲಿನ ಆಳ ವ್ಯಾಕುಲದ ಸುಕ್ಕುಗಳು ತುಸು ಸಡಿಲಗೊಳ್ಳುತ್ತಿದ್ದವು. ಒಳಹೋಗಿರುವ ಅವರ ಕಣ್ಣುಗಳು ಪಿಳಿಪಿಳಿಗುಟ್ಟುತ್ತ ಹೊಸ ಬೆಳಕನ್ನು ತುಂಬಿಕೊಳ್ಳುತ್ತಿದ್ದವು. ಮಳೆಹನಿಯ ಸ್ಪರ್ಶದಿಂದ ಹೊರಡುವ ಮಣ್ಣವಾಸನೆಗೆ ಮೊದಲೇ